ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 223-232
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುರಿತು ಒಂದು ಅಧ್ಯಯನ

**ಡಾ. ಚನ್ನಮ್ಮ ತಳವಾರ**
ಬೋಧನಾ ಸಹಾಯಕಿ, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

***Abstract:***
*ಮಾನವನು ಬೌದ್ಧಿಕ ವಿಕಾಸ ಜೀವಿ. ಉತ್ತಮ ರೂಢಿ ಸಂಪ್ರದಾಯಗಳನ್ನು ಹಾಗೂ ಪ್ರಜ್ಞೆಗಳನ್ನು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಿಕೊಂಡು ಆರ್ಥಿಕ, ಸಾಮಾಜಿಕ, ಧಾರ್ಮಿಕ, ನೈತಿಕ ಹಾಗೂ ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿ ಆಧುನಿಕ ಜಗತ್ತನ್ನು ನಿರ್ಮಿಸಿರುವನು. ಶಿಕ್ಷಣದ ಸಾರ್ವತ್ರೀಕರಣವು; ಪ್ರತಿಯೊಂದು ಭಾರತೀಯ ಮಗುವಿಗೆ ಶಿಕ್ಷಣ ದೊರೆತು ಮಕ್ಕಳಿಗೆ ಪ್ರಗತಿಯನ್ನು ಸಾಧಿಸುವ ಉದ್ದೇಶ ಹೊಂದಿದೆ. ಅದಕ್ಕೆ ಮಗುವಿನ ಪ್ರಗತಿಯಲ್ಲಿ ಸದ್ಗುಣ, ಸಂಪನ್ನತೆ, ಜ್ಞಾನ ಮತ್ತು ಬೌದ್ಧಿಕ ವಿಕಾಸದ ಪರಿಪೂರ್ಣತೆ ಮತ್ತು ಮಾನಸಿಕ ಪಕ್ವತೆಯ ಪೌರತ್ವವನ್ನು ಬೆಳೆಸುವುದು ಶಿಕ್ಷಣ ಮಹತ್ವದ ಅಂಶವಾಗಿದೆ. ಈ ಮಹತ್ವದ ಕಾರ್ಯವನ್ನು ವಸತಿ ಶಾಲೆಗಳು ನಿರ್ವಹಿಸುತ್ತವೆ. ಈ ಲೇಖನದ ಮುಖ್ಯ ಉದ್ದೇಶ ಸರ್ಕಾರದ ಯೋಜನೆಗಳಿಂದ ಪಡೆದುಕೊಳ್ಳುವ ಸೌಲಭ್ಯಗಳು ಶಿಕ್ಷಣದ ಪ್ರಗತಿ ಮುಂತಾದವುಗಳನ್ನು ತಿಳಿಯುವುದಾಗಿದೆ. ಯಾದೃಚಿಕ ಪ್ರತಿಚಯನ ಪದ್ಧತಿಯಿಂದ ಪ್ರತಿಶತ ಪ್ರಮಾಣದಿಂದ ವಿಶ್ಲೇಷಿಸಿದಾಗ ಬಂದಂತಹ ಫಲಿತಾಂಶವು ಧನಾತ್ಮಕವಾಗಿದೆ. ವಿದ್ಯಾರ್ಥಿಗಳು ಪಡೆಯುವ ಸೌಲಭ್ಯಗಳು, ಬೌದ್ಧಿಕ ಮಟ್ಟ, ಶೈಕ್ಷಣಿಕ ಪ್ರಗತಿ, ಸೂಕ್ತ ವಾತಾವರಣ, ಪಾಲಕರ ಅಭಿಪ್ರಾಯ ಇವುಗಳ ಮೂಲಕ ಪಡೆದುಕೊಂಡ ಫಲಿತಾಂಶ ಪರಿಮಾಣಾತ್ಮಕವಾಗಿಯೂ ಮತ್ತು ಗುಣಾತ್ಮಕವಾಗಿಯೂ ಪ್ರಗತಿ ಪಥದತ್ತ ಸಾಗುತ್ತಿದೆ ಎಂಬುದು ತಿಳಿದು ಬಂದಿದೆ.*

***Keywords:*** *ವಸತಿ ಶಾಲೆಗಳು, ನಿರ್ವಹಣೆ, ಶೈಕ್ಷಣಿಕ ಪ್ರಗತಿ, ವಿದ್ಯಾರ್ಥಿಗಳ ಆಸಕ್ತಿ, ಪಾಲಕರು, ಮೇಲ್ವಿಚಾರಕರು, ಶಿಕ್ಷಕರ ಮನೋಭಾವ.*

## ಪೀಠಿಕೆ

ಎಲ್ಲ ಕಾಲಗಳಲ್ಲಿಯೂ ಎಲ್ಲ ಜನರು ಶಿಕ್ಷಣದ ಮಹತ್ವವನ್ನು ಅರಿತುಕೊಂಡಿದ್ದರು. ಇತರ ಪ್ರಾಣಿಗಳಿಗಿಂತ ಮಾನವನಿಗೆ ಶಿಕ್ಷಣ ಅತ್ಯವಶ್ಯಕ. ಮೀನಿಗೆ ನೀರು ಎಷ್ಟು ಅತ್ಯವಶ್ಯವೋ ಮಾನವನಿಗೆ ಅಷ್ಟೇ ಅವಶ್ಯಕ ಶಿಕ್ಷಣ. ಮಾನವನ ಜೀವನವು ಜೈವಿಕ ಹಾಗೂ ಸಾಮಾಜಿಕ ಎಂಬ ದ್ವಿಮುಖವಾದ ಅಂಶಗಳಿಂದ ಕೂಡಿದೆ. ಜೈವಿಕ ಅಂಶವು ಆಹಾರ ಹಾಗೂ ವಂಶಾಭಿವೃದ್ಧಿಯಿಂದ ಸಂರಕ್ಷಿಸಲ್ಪಟ್ಟಿದೆ. ಸಾಮಾಜಿಕ ಅಂಶವು ಶಿಕ್ಷಣದಿಂದ ಸಂರಕ್ಷಿಸಲ್ಪಡುವುದು. ಪಶು ಪಕ್ಷಿ ಹಾಗೂ ಸಸ್ಯಗಳಲ್ಲಿಯೂ ಸಹ ಜೈವಿಕ ಅಂಶವು ಕಂಡುಬರುವುದು. ಆದರೆ ಸಾಮಾಜಿಕ ಅಥವಾ

***Please cite this article as:*** ಚನ್ನಮ್ಮ ತಳವಾರ. (2025). ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುರಿತು ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(3), 223–232

ಸಾಂಸ್ಕೃತಿಕ ಅಂಶವು ಮಾನವರಲ್ಲಿ ಮಾತ್ರ ಕಂಡು ಬರುವ ಪ್ರಾಮುಖ್ಯವಾದ ಗುಣಲಕ್ಷಣವಾಗಿದೆ. ಶಿಕ್ಷಣ ತಜ್ಞರ ಪ್ರಕಾರ "ಶಿಕ್ಷಣವು ಮಾನವನ ತೃತೀಯ ಚಕ್ಷುವಾಗಿದೆ". ಇದು ಅವನಿಗೆ ಎಲ್ಲ ಕಾರ್ಯಗಳಲ್ಲಿ ಒಳನೋಟವನ್ನು ಒದಗಿಸುವುದು ಹಾಗೂ ಅವನು ಹೇಗೆ ವರ್ತನೆ ಮಾಡಬೇಕು ಎಂಬುದನ್ನು ಬೋಧಿಸುವುದು. ಇನ್ನೊಬ್ಬ ಶಿಕ್ಷಣ ತಜ್ಞನ ಪ್ರಕಾರ "ಅಶಿಕ್ಷಿತನಾದ ವ್ಯಕ್ತಿಯು ಬಾಲ ಹಾಗೂ ಕೋಡುಗಳಿಲ್ಲದ ಪ್ರಾಣಿಯಾಗಿರುವನು".

ಶಿಕ್ಷಣವು ಪ್ರತಿಯೊಂದು ಮಗುವಿಗೆ ಜನ್ಮತಃ ಪಡೆದುಕೊಂಡ ಹಕ್ಕು. ಆದ್ದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಈ ವಸತಿ ಶಾಲೆಗಳನ್ನು ತೆರೆಯಲಾಗಿದೆ. ಇಲ್ಲಿ ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವಕ್ಕಾಗಿ ಶಿಕ್ಷಣವನ್ನು ಪಡೆಯಲು ಇರುವರು ಆದ್ದರಿಂದ ಇದರ ನಿರ್ವಹಣೆಯು ಕೂಡ ಮಹತ್ವದ್ದಾಗಿದೆ.

**ಶಿಕ್ಷಣ ಬೆಳೆವಣಿಗೆಯಲ್ಲಿ ವಸತಿ ನಿಲಯಗಳ ಪಾತ್ರ**

***ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ನೆರವು*** : ಅತಿ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತ ವರ್ಗಗಳಿಗೆ ಸಾಮಾಜಿಕ ನ್ಯಾಯ ನೀಡಿ ಅವರನ್ನು ಪ್ರಗತಿಯ ಮುಖ್ಯ ವಾಹಿನಿಯಲ್ಲಿ ಸೇರಿಸುವುದೇ ಈ ಯೋಜನೆಯ ಮುಖ್ಯ ಗುರಿಯಾಗಿದೆ.

***ಶೈಕ್ಷಣಿಕ ಗುರಿ ತಲುಪಲು*** : ವಸತಿ ನಿಲಯಗಳು ಬಡಮಕ್ಕಳ ಕನಸನ್ನು ನನಸಾಗಿ ಮಾಡಲಿಕ್ಕೆ ಮುಖ್ಯ ಪಾತ್ರ ವಹಿಸುತ್ತದೆ. ವಸತಿ ನಿಲಯಗಳು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಅಂದರೆ ಕಡು ಬಡವ ಹಾಗೂ ಹಿಂದುಳಿದ ವರ್ಗಗಳ ಮಕ್ಕಳ ಕಲ್ಯಾಣಕ್ಕಾಗಿ ಶ್ರಮಿಸುವಂತೆ ನಿಲಯಗಳಿಗೆ ಈ ಕಾರ್ಯ ಯೋಜನೆಯನ್ವಯ 5 ರಿಂದ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ.

***ಗ್ರಾಮೀಣ ಮಕ್ಕಳ ಜೀವಾಳ*** : ವಸತಿ ನಿಲಯಗಳಲ್ಲಿ ವಾಸವಾಗಿರುವ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶಗಳಿಂದ ಬಂದವರಾಗಿದ್ದಾರೆ ಮತ್ತು ಈ ವಸತಿ ನಿಲಯಗಳು ಆರ್ಥಿಕವಾಗಿ ಶಿಕ್ಷಣ ಪಡೆಯಲು ಹಿಂದುಳಿದ ಮಕ್ಕಳಿಗೆ ದಾರಿ ದೀಪವಾಗುತ್ತವೆ.

***ಸಾಮಾಜಿಕ ಬೇಧ ಭಾವ ಹೋಗಲಾಡಿಸುವದು :*** ಸಮಾಜದಲ್ಲಿ ಮೇಲು–ಕೀಳು, ಉಚ್ಚ–ನೀಚ, ಶ್ರೀಮಂತ–ಬಡವ ಎಂಬ ಬೇಧ ಭಾವ ಹೋಗಲಾಡಿಸಲು ನಿರಂತರವಾಗಿ ಶ್ರಮಿಸುತ್ತವೆ ಹಾಗೂ ಸಾಮಾಜಿಕ ಭದ್ರತೆಯನ್ನು ಸಹ ಹೆಚ್ಚಿಸಿಕೊಳ್ಳುವುದಕ್ಕೆ ಸಹ ಸಹಾಯಕಾರಿಯಾಗಿವೆ.

***ಸರ್ಕಾರದ ಸೌಲಭ್ಯಗಳನ್ನು ಸಿಗುವಂತೆ ಮಾಡುವದು:*** ಸರ್ಕಾರದ ಎಲ್ಲ ಉಚಿತ ಸೌಲಭ್ಯಗಳನ್ನು ದೊರೆಯುವಂತೆ ಮಾಡುವುದಾಗಿದೆ. ಪಾಲಕರಿಂದ ದೊರೆಯದ ವಿಶೇಷ ಸೌಲಭ್ಯಗಳನ್ನು ನೀಡಿ ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸ ಹೆಚ್ಚಿಸುವುದಾಗಿದೆ.

***ಉಚಿತ ಪುಸ್ತಕ ವಿತರಣೆ*** : ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯ ಸಲುವಾಗಿ ಸರಕಾರವು ವಸತಿ ನಿಲಯದ ವಿದ್ಯಾರ್ಥಿಗಳಿಗೆ ಉಚಿತ ಬಟ್ಟೆ, ಪುಸ್ತಕಗಳನ್ನು ನೀಡಿ ಅವರಿಗೆ ಪ್ರೋತ್ಸಾಹವನ್ನು ನೀಡುತ್ತದೆ.

**ವಸತಿ ಶಾಲೆಯ ಗುರಿಗಳು**

ಗ್ರಾಮಿಣ ಮಕ್ಕಳಲ್ಲಿ ಪ್ರತಿಭಾವಂತರನ್ನು ಗುರುತಿಸಿ ಅವರಿಗೆ ಉನ್ನತ ಮಟ್ಟದ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿಕೊಡುವದು, ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ಆಧಾರದ ಮೇಲೆ ಶಿಕ್ಷಣದಲ್ಲಿ ಅತ್ಯುತ್ತಮವಾದುದನ್ನು ಗ್ರಾಮಿಣ ಮಕ್ಕಳಿಗೆ ನೀಡುವುದು, ಭೌತಿಕ ಹಾಗೂ ಸಾಮಾಜಿಕ ಪರಿಸರಗಳ ಹಿನ್ನೆಲೆ ಹಾಗೂ ಮುನ್ನೋಟಗಳ ಸಾರ್ಥಕ ತಿಳುವಳಿಕೆಗಾಗಿ ಪ್ರೋತ್ಸಾಹ ನೀಡುವುದು, ವ್ಯಕ್ತಿತ್ವದಲ್ಲಿ ಶಾರೀರಿಕ, ಬೌದ್ಧಿಕ ಹಾಗೂ ಸೌಂದರ್ಯ ಪ್ರಜ್ಞೆ ಬೆಳವಣಿಗೆ, ವೈಜ್ಞಾನಿಕ ಮನೋಭಾವ ಪ್ರಜಾತಂತ್ರದ ತಿಳಿವಳಿಕೆ ಹಾಗೂ ನೈತಿಕ ಮತ್ತು ಆಧ್ಯಾತ್ಮಿಕತೆಗೆ ಪ್ರೋತ್ಸಾಹ ಮಾಡುವುದು, ಅವ್ಯಕ್ತ ಸಮಸ್ಯೆಗಳನ್ನು ಎದುರಿಸಲು ಆತ್ಮವಿಶ್ವಾಸ

ಹೆಚ್ಚಿಸುವುದು, ಭೌತಿಕ, ಸಾಮಾಜಿಕ, ತಾಂತ್ರಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಸರಗಳ ಯೋಗ್ಯ ತಿಳುವಳಿಕೆ ನೀಡುವುದು, ಶ್ರಮ ಗೌರವ ಹಾಗೂ ದುಡಿತದ ಬಗ್ಗೆ ಆರೋಗ್ಯಕರ ದೃಷ್ಟಿಕೋನವನ್ನು ಬೆಳೆಸುವುದು ಹಾಗೂ ಜಾತ್ಯತೀತ, ಸಮಾಜಿಕ ನ್ಯಾಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ತಿಳಿವಳಿಕೆಗೆ ಪ್ರೋತ್ಸಾಹಿಸುವುದು ವಸತಿ ಶಾಲೆಗಳ ಪ್ರಮುಖ ಗುರಿಗಳಾಗಿವೆ.

**ವಸತಿ ಶಾಲೆಯ ಧೇಯೋದ್ದೇಶಗಳು**

ವಸತಿ ಶಾಲೆಯ ವಿದ್ಯಾರ್ಥಿಗಳಲ್ಲಿ ಹೊಂದಾಣಿಕೆ ಗುಣ ಬೆಳಸುವುದು, ಆರ್ಥಿಕವಾಗಿ ಹಿಂದುಳಿದ ಮಕ್ಕಳ ಜೊತೆಗೆ ದುರ್ಬಲರ ಪ್ರತಿಭಾವಂತ ಮಕ್ಕಳಿಗೆ ಉತ್ತಮ ವಸತಿ ಶಿಕ್ಷಣ ಒದಗಿಸುವುದು, ವಸತಿ ಶಾಲೆಗಳ ಮೂಲಕ ಮಕ್ಕಳಲ್ಲಿ ಸರ್ವಾಂಗೀಣ ವಿಕಾಸ ಬೆಳೆಸುವುದು, ಉತ್ತಮ ಗುಣಮಟ್ಟದ ಆಧುನಿಕ ಶಿಕ್ಷಣವನ್ನು ಒದಗಿಸುವುದು ಮತ್ತು ಸಂಸ್ಕೃತಿಯನ್ನು ಪುಷ್ಟಿಗೊಳಿಸುವುದು, ವಿದ್ಯಾರ್ಥಿಗಳಿಗೆ ಪೌಷ್ಟಿಕಾಂಶದ ಆಹಾರ ನೀಡಿ ಸದೃಢ ಕಾಯಕದವರನ್ನಾಗಿ ಮಾಡುವುದು, ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸುವುದು, ಪಾಲಕರ ವೈಯಕ್ತಿಕ ಜವಾಬ್ದಾರಿಯ ಸಮಸ್ಯೆಯನ್ನು ಹೋಗಲಾಡಿಸುವುದು, ಪರಿಸರದ ಕುರಿತು ಅರಿವನ್ನು ಮೂಡಿಸುವುದು ಮತ್ತು ಚಟುವಟಿಕೆಗಳ ಮೂಲಕ ದೈಹಿಕ ಶಿಕ್ಷಣದ ಸೌಲಭ್ಯಗಳನ್ನು ಒದಗಿಸುವುದು ವಸತಿ ಶಾಲೆಗಳ ಧೇಯೋದ್ದೇಶಗಳಾಗಿವೆ.

**ಅಧ್ಯಯನದ ಅವಶ್ಯಕತೆ**

ದೇಶ ಸ್ವತಂತ್ರವಾದ ಮೇಲೆ ಶೈಕ್ಷಣಿಕ ಆಡಳಿತ ವ್ಯವಸ್ಥೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಹಿಸಿಕೊಂಡಿವೆ. ಶಿಕ್ಷಣದ ಜವಾಬ್ದಾರಿಯು ಕೇಂದ್ರ ಸಮವರ್ತಿ ಪಟ್ಟಿಯಲ್ಲಿ ಸೇರಿಸಿರುವುದರಿಂದ ಕಾರ್ಯ ನಿಯಮಗಳನ್ನು ಶಿಕ್ಷಣ ತಜ್ಞರ ಸಲಹೆಯಂತೆ ರೂಪಿಸುತ್ತದೆ. ಅಲ್ಲದೆ ಆರ್ಥಿಕ ನೆರವನ್ನು ನೀಡುತ್ತದೆ. ಕೇಂದ್ರ ಸರ್ಕಾರವು ಪ್ರತಿಯೊಂದು ರಾಜ್ಯ ಸರ್ಕಾರಕ್ಕೂ ಶೈಕ್ಷಣಿಕ ಚಟುವಟಿಕೆಗಳನ್ನು ಹಂಚಿಕೊಂಡಿರುತ್ತದೆ. ಅದರ ಮೂಲಕ ಎಲ್ಲ ಕಾರ್ಯಕಲಾಪಗಳನ್ನು ವಿವಿಧ ಮುಖಗಳಲ್ಲಿ ಗಮನವಿಟ್ಟು ನಿರ್ಧರಿಸಿ ಸರಳವಾಗಿ ಮತ್ತು ಸುಗಮವಾಗಿ ನಡೆಯುವಂತೆ ಮಾಡುತ್ತದೆ. ಶೈಕ್ಷಣಿಕ ಪ್ರಗತಿ ಸಾಧಿಸಲು ಯೋಜನೆಗಳು, ನಿಯಮಗಳು ಅತೀ ಅವಶ್ಯಕವಾದವುಗಳು. ಸಂಪೂರ್ಣ ಸಾಕ್ಷರತೆ ಮತ್ತು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದರೆ ದೇಶ ಪ್ರಗತಿ ಪಥದತ್ತ ಸಾಗುವಲ್ಲಿ ಸಂದೇಹವೇ ಇಲ್ಲ. ಸರ್ಕಾರದ ಶಾಲೆಗಳಿಗೆ ಕೊಡತಕ್ಕಂತಹ ಅನುದಾನ ಮತ್ತು ಯೋಜನೆಗಳನ್ನು ಉಪಯೋಗವಾಗುತ್ತದೆ ಎಂಬುದು ತಿಳಿದುಕೊಳ್ಳುವುದು ಮಹತ್ವಪೂರ್ಣವಾದದ್ದು ಇಂತಹ ಒಂದು ಮಹತ್ವ ಪೂರ್ಣವಾದ ವಸತಿ ಶಾಲೆಗಳ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಈ ಅಧ್ಯಯನದ ಅವಶ್ಯಕತೆ ಆಗಿರುತ್ತದೆ. ಈಗಿನ ಆಧುನಿಕ ಸಾಮಾಜಿಕ ಬದಲಾವಣೆಯಲ್ಲಿ ಕುಟುಂಬ ವರ್ಗದಲ್ಲಿ ಶೈಕ್ಷಣಿಕ ನಿಯಂತ್ರಣ ಸಾಧಿಸಲು ತಮ್ಮ ಮಕ್ಕಳನ್ನು ವಸತಿ ಶಾಲೆಗೆ ಸೇರಿಸಲು ಬಯಸುತ್ತಾರೆ. ಉದ್ಯೋಗಸ್ಥ ಪಾಲಕರು ಕೌಟುಂಬಿಕ ಸಮಸ್ಯೆಗಳನ್ನು ಒಳಗೊಂಡಿರುವುದರಿಂದ ಮಕ್ಕಳಿಗೆ ಸರಿಯಾದ ಶಿಕ್ಷಣ ಮನೆಯಲ್ಲಿ ದೊರಕಿಸಲು ಸಾಧ್ಯವಾಗದೇ ಇರುವವರು ತಮ್ಮ ಮಕ್ಕಳನ್ನು ವಸತಿ ಶಾಲೆಗಳಿಗೆ ಸೇರಿಸಲು ಬಯಸುವರು.

**ಸಾಹಿತ್ಯ ಪುನರಾವಲೋಕನ**

ಹಲವಾರು ಸಂಶೋಧಕರು ಕೈಗೊಂಡ ಸಂಶೋಧನೆಗಳ ಸಾಹಿತ್ಯದ ಪುನರಾವಲೋಕನ ಮಾಡಿದಾಗ ತಿಳಿದು ಬಂದಿರುವುದೇನೆಂದರೆ ವಸತಿ ನಿಲಯಗಳ ಮೂಲಕ ಶೈಕ್ಷಣಿಕ ಪ್ರಗತಿ ಸೌಲಭ್ಯಗಳ ಪ್ರಯೋಜನವು ಮಕ್ಕಳ ಶೈಕ್ಷಣಿಕ ಪ್ರಗತಿಯ ಮೇಲೆ ಗಮನಾರ್ಹವಾದ ಬೆಳಕು ಚೆಲ್ಲಿರುವುದು ಕಂಡು ಬಂದಿದೆ.

ಧುಲ್ಲಾ (1989)ರಲ್ಲಿ ಆಡಳಿತಾತ್ಮಕ ಶೈಲಿ ಶಿಕ್ಷಕರ ಸೇವಾ ತೃಪ್ತಿದಾಯಕತೆ ಮತ್ತು ಶಾಲಾ ವಾತವರಣದ ಸ್ವರೂಪವನ್ನು ನಿರ್ಧರಿಸುವಿಕೆಯಲ್ಲಿ ವಿದ್ಯಾರ್ಥಿಗಳ

ಸಂಸ್ಥೆಯ ಗ್ರಹಿಕೆಯ ಪಾತ್ರಗಳ ಕುರಿತು ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದ ಮೂಲಕ ಕಂಡು ಬಂದಿರುವುದು ಏನೆಂದರೆ ವಿವಿಧ ತರಹದ ಆಡಳಿತ ಸೇವೆಗಳಲ್ಲಿ ಶಿಕ್ಷಕರ ಸೇವೆ ಮತ್ತು ಆಡಾಳಿತಾತ್ಮಕ ಶೈಲಿಯು ತೃಪ್ತಿದಾಯಕವಾಗಿರುವುದು ಕಂಡು ಬಂದಿದೆ.

ವಿಠ್ಠಲ್ ಎಸ್ ಸಿ (1990) ಆಯ್ಕೆ ಮಾಡಿದ 4 ರಾಜ್ಯಗಳಲ್ಲಿ ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಶಾಲೆಗಳ ಕಟ್ಟಡಗಳ ಕುರಿತು ಒಂದು ವಿಮರ್ಶಾತ್ಮಕ ಅಧ್ಯಯನ ಮಾಡಿದ್ದಾರೆ. ಈ ಅಧ್ಯಯನದ ಉದ್ದೇಶವು ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಶಾಲೆಯ ಕಟ್ಟಡಗಳ ಸಾಮಾನ್ಯ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದಾಗಿರುತ್ತದೆ. ಆಯ್ಕೆ ಮಾಡಿದ ರಾಜ್ಯಗಳಲ್ಲಿ ಕಟ್ಟಡಗಳ ಗೋಡೆಗಳು ಅಷ್ಟೊಂದು ಸಮರ್ಪಕವಾದ ಸ್ಥಿತಿಯಲ್ಲಿ ಇರುವುದಿಲ್ಲ ಎಂಬುದು ಕಂಡು ಬಂದಿತು. ವಿಜ್ಞಾನ ಪ್ರಯೋಗಾಲಯಕ್ಕೆ ಸಂಬಂಧಿಸಿದಂತೆ ಬೆಳಕು ಮತ್ತು ನೀರಿನ ತೊಂದರೆ ಇರುವದು ಪ್ರಮುಖ ತಿರ್ಮಾನಗಳ ಮೂಲಕ ಕಂಡು ಬಂದಿತು. 4 ರಾಜ್ಯಗಳಲ್ಲಿಯೂ ಕೂಡ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೌಚಾಲಯ ವ್ಯವಸ್ಥೆಗಳು ಅಷ್ಟೊಂದು ತೃಪ್ತಿಕರವಾಗಿಲ್ಲ ಎಂಬುದು ಕಂಡು ಬಂದಿತು.

ಸಿಂಗ (1990) ಬಿಹಾರದಲ್ಲಿನ ಗ್ರಾಮೀಣ ಪ್ರಾಥಮಿಕ ಶಾಲೆಯ ಕಾರ್ಯಗಳು ಆಧಾರದೊಂದಿಗೆ ಗ್ರಾಮಿಣ ಪ್ರದೇಶದ ಜನರಲ್ಲಿ ಸಾಕ್ಷರತೆಯನ್ನು ಮೂಢಿಸುವ ಸಲುವಾಗಿ ಪ್ರಾಥಮಿಕ ಕಾರ್ಯಗಳನ್ನು ತಿಳಿಸುವುದಾಗಿರುತ್ತದೆ. ಸಂಶೋಧಕರು ಬಿಹಾರನಲ್ಲಿನ ಗ್ರಾಮೀಣ ಪ್ರಾಥಮಿಕ ಶಾಲೆಯ ಕಾರ್ಯಗಳ ಅಧ್ಯಯನವನ್ನು ಶಾಲೆಗೆ ಹೋಗುವವರು, ಶಾಲೆಗೆ ಹೋಗದೆ ಇರುವವರು, ಶಾಲೆಯನ್ನು ಬಿಟ್ಟವರು, ವಿದ್ಯಾರ್ಥಿ ಮತ್ತು ಶಿಕ್ಷಕರ ಸಂಬಂಧ, ವಿದ್ಯಾರ್ಥಿ ಮತ್ತು ಪೋಷಕರ ಸಂಬಂಧ, ಶಾಲೆ ಮತ್ತು ಸಮಾಜದ ಸಂಬಂಧ ಇತ್ಯಾದಿಗಳನ್ನು ತಮ್ಮ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಂಡಿದ್ದಾರೆ. ಸಂದರ್ಶನ ವಿಕ್ಷಣೆ ಮತ್ತು ಪ್ರಶ್ನಾವಳಿಗಳನ್ನು ಮಾಹಿತಿ ಸಂಗ್ರಹಣೆಗಾಗಿ ಈ ಸಾಧನಗಳನ್ನು ಬಳಸಿದ್ದಾರೆ. ಸಾಕ್ಷರತೆಯ ಪ್ರಮಾಣವು ಕಾರ್ಮಿಕ ವರ್ಗದವರಲ್ಲಿ ನಿರ್ಲಕ್ಷಿಸಲಾಗಿರುತ್ತದೆ ಎಂಬುದು ತಿಳಿದು ಬಂದಿತು ಶಾಲೆಯು ಕೇವಲ 3 ಮಂದಿ ಕೆಲಸ ಮಾಡುವ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕವಾದ ಕೋಣೆಯ ಸೌಲಭ್ಯವನ್ನು ಒದಗಿಸುತ್ತದೆ ಎಂಬುದು ಕಂಡು ಬಂದಿತು. ಶಿಕ್ಷಕರ ಮತ್ತು ಪೋಷಕರ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಅನ್ಯೂನ್ಯವಾಗಿರುತ್ತದೆ ಎಂಬುದು ಸಂದರ್ಶನದ ಮೂಲಕ ತಿಳಿದು ಬಂದಿತು.

**ಅಧ್ಯಯನದ ಉದ್ದೇಶಗಳು**

1. ಬೆಳಗಾವಿ ತಾಲೂಕಿನ ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳು ಪಡೆಯುತ್ತಿರುವ ಸೌಲಭ್ಯಗಳನ್ನು ತಿಳಿದುಕೊಳ್ಳುವುದು.
2. ಬೆಳಗಾವಿ ತಾಲೂಕಿನ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗಾಗಿ ಸರಕಾರವು ಕೈಗೊಂಡ ಕ್ರಮಗಳನ್ನು ತಿಳಿಯುವುದು.
3. ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚಿಸ್ಚುವ ಉದ್ದೇಶದಿಂದ ಹಾಕಿಕೊಂಡ ವಿವಿಧ ಕಾರ್ಯ ಯೋಜನೆಯನ್ನು ತಿಳಿದುಕೊಳ್ಳುವುದು.
4. ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ಮೂರು ವರ್ಷಗಳ 5, 6, 7ನೇ ವರ್ಗದ ವಿದ್ಯಾರ್ಥಿಗಳ ಪ್ರಗತಿ ವಿಶ್ಲೇಷಿಸುವದು.
5. ಬೆಳಗಾವಿ ತಾಲೂಕಿನ ವಿದ್ಯಾರ್ಥಿನಿಲಯದಲ್ಲಿನ ಸೂಕ್ತ ವಾತಾವರಣವನ್ನು ಇರುವ ಬಗ್ಗೆ ಸಮೀಕ್ಷಿಸುವುದು.
6. ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ವಿದ್ಯಾರ್ಥಿಗಳ ಪಾಲಕರ ಅಬಿಪ್ರಾಯ ಸಂಗ್ರಹಿಸುವುದು.

**ಪ್ರಾಕಲ್ಪನೆಗಳು**

1. ಬೆಳಗಾವಿ ತಾಲೂಕಿನ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳು ಪಡೆಯುತ್ತಿರುವ ಸೌಲಭ್ಯಗಳು ಉತ್ತಮವಾಗಿರುವುದು.
2. ಬೆಳಗಾವಿ ತಾಲೂಕಿನ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಿಸ್ಟುವ ಉದ್ದೇಶದಿಂದ ಹಾಕಿಕೊಂಡ ವಿವಿಧ ಕಾರ್ಯ ಯೋಜನೆಗಳು ಉತ್ತಮವಾಗಿರುವವು.
3. ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ಪ್ರಗತಿ ಉತ್ತಮವಾಗಿರುವುದು.
4. ಬೆಳಗಾವಿ ತಾಲೂಕಿನ ವಿದ್ಯಾರ್ಥಿ ನಿಲಯದಲ್ಲಿ ಸೂಕ್ತ ವಾತಾವರಣ ಉತ್ತಮವಾಗಿರುವುದು.
5. ಬೆಳಗಾವಿ ತಾಲೂಕಿನ ವಸತಿ ಶಾಲೆಯಲ್ಲಿರುವ ಪಾಲಕರು ತೃಪ್ತಿದಾಯಕ ಮನೋಭಾವನೆ ಹೊಂದಿರುವರು.

**ಸಂಶೋಧನಾ ವಿಧಾನ ಮತ್ತು ಪ್ರತಿಚಯನದ ಗಾತ್ರ**

ಪ್ರಸ್ತುತ ಅಧ್ಯಯನದ ಸಮಸ್ಯೆಗೆ ದತ್ತಾಂಶಗಳನ್ನು ಸಂಗ್ರಹಿಸಲು ಬೆಳಗಾವಿ ತಾಲೂಕಿನ ಆಯ್ದ ವಸತಿ ಶಾಲೆಗಳನ್ನು ಯಾದೃಚ್ಛಿಕ ಪ್ರತಿಚಯನ ಪದ್ಧತಿಯನ್ನು ಬಳಸಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಆ ತಾಲೂಕಿನ ಎಲ್ಲ ಭಾಗಗಳಿಂದ ಆಯಾ ಪ್ರಾತಿನಿಧ್ಯತೆಗನುಗುಣವಾಗಿ ಮಾಹಿತಿ ಸಂಗ್ರಹಿಸಲಾಗಿದೆ. 10 ವಸತಿ ಶಾಲೆಗಳಿಂದ ಪ್ರತಿ ವಸತಿ ಶಾಲೆಯ ಮೇಲ್ವಿಚಾರಕರಿಂದ ಭೌತಿಕ ಸೌಲಭ್ಯ ಕುರಿತು, ಮೇಲ್ವಿಚಾರಕರ ಅಭಿಪ್ರಾಯ ಕುರಿತು, ಶೈಕ್ಷಣಿಕ ಪ್ರಗತಿ ಕುರಿತು ಮಾಹಿತಿ ಸಂಗ್ರಹಿಸಲಾಯಿತು. ಮತ್ತು ಪ್ರತಿ ವಸತಿ ಶಾಲೆಯಿಂದ 3 ಜನ ಪಾಲಕರ ಅಭಿಪ್ರಾಯ ಕುರಿತಂತೆ ಒಟ್ಟು 30 ಜನ ಪಾಲಕರ ಅಭಿಪ್ರಾಯಗಳನ್ನು ಸಂಗ್ರಹಿಸುವುದನ್ನು ಈ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

**ದತ್ತಾಂಶ ಸಂಗ್ರಹಣಾ ಸಾಧನ**

ಸಂಶೋಧನಾ ಕಾರ್ಯದಲ್ಲಿ ಮಾಪನಗಳಿಗೆ ಬಹಳ ಪ್ರಾಮುಖ್ಯತೆ ಇದ್ದು ಸಂಶೋಧನೆಯನ್ನು ಕೈಗೊಳ್ಳುವಲ್ಲಿ ಬಳಸುವ ಸಾಧನಗಳು, ದತ್ತಾಂಶ ಸಂಗ್ರಹಿಸಲು ಅವಶ್ಯಕತೆ ಇದೆ. ಮಾಪನಗಳೆಂದರೆ ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡಿರುವ ವಿಷಯದ ಬಗ್ಗೆ ವಿವಿಧ ಮೂಲಗಳಿಂದ ಮಾಹಿತಿಗಳನ್ನು ಸಂಗ್ರಹಿಸಲು ಬಳಸುವ ಒಂದು ಸಾಧನ.

**ಪ್ರಸ್ತುತ ಸಂಶೋಧನೆಗೆ ಸಂಶೋಧಕನು ದತ್ತಾಂಶಗಳನ್ನು ಸಂಗ್ರಹಿಸಲು 'ಪ್ರಶ್ನಾವಳಿ' ಸಾಧನಗಳನ್ನು ಬಳಸಿಕೊಳ್ಳಲಾಗಿದೆ.**

ಸಂಶೋಧಕ ದತ್ತಾಂಶಗಳನ್ನು ಸಂಗ್ರಹಿಸಲು "ಪ್ರಶ್ನಾವಳಿ" ಸಾಧನವನ್ನು ಬಳಸಿಕೊಂಡು ಈ ಕೆಳಗಿನಂತೆ ಸಾಧನಗಳ ಮೂಲಕ ಬೆಳವಣಿಗೆ ಮಾಡಲಾಯಿತು.

1. ಮೇಲ್ವಿಚಾರಕರ ಅಭಿಪ್ರಾಯ ಕುರಿತು ಪ್ರಶ್ನಾವಳಿ.
2. ಮೇಲ್ವಿಚಾರಕರಿಗೆ ಭೌತಿಕ ಸೌಲಭ್ಯ ಕುರಿತು ಮಾಹಿತಿ ಸಂಗ್ರಹಣೆ
3. ಶೈಕ್ಷಣಿಕ ಪ್ರಗತಿ ಕುರಿತು ದತ್ತಾಂಶಗಳ ಸಮೀಕ್ಷೆ.
4. ಪಾಲಕರ ಅಭಿಪ್ರಾಯ ಕುರಿತು ಪ್ರಶ್ನಾವಳಿ

**ದತ್ತಾಂಶಗಳ ಸಂಗ್ರಹಣೆ**

ಪ್ರಸ್ತುತ ಸಂಶೋಧನೆಗೆ ಸಂಶೋಧಕರು ದತ್ತಾಂಶಗಳ ಸಂಗ್ರಹಣೆಗೆ ಸಂಬಂಧಿಸಿದ ಬೆಳಗಾವಿ ತಾಲೂಕಿನಲ್ಲಿ ಆಯ್ದುಕೊಂಡ 10 ವಸತಿ ಶಾಲೆಗಳಿಗೆ ಸ್ವತಃ ಭೇಟಿಕೊಟ್ಟು ವಸತಿ ಶಾಲೆಯ ಮೇಲ್ವಿಚಾರಕರಿಂದ ಅನುಮತಿ ಪಡೆದು ಸಂಶೋಧನಾ ಸಮಸ್ಯೆಯ ವಿಷಯ ವಿವರಣೆ ಮಾಡಿಕೊಡಲಾಯಿತು, ಮೇಲ್ವಿಚಾರಕರಿಗೆ ಪ್ರಶ್ನಾವಳಿ ನೀಡಿ ಅವರಿಂದ ಅತ್ಯಂತ ಸಮಂಜಸ ಹಾಗೂ ಉಪಯುಕ್ತವಾದ ಮಾಹಿತಿಯನ್ನು ಪಡೆಯಲಾಯಿತು. 5, 6, 7 ನೇ ತರಗತಿಯ 3 ವರ್ಷದ ಶೈಕ್ಷಣಿಕ

ಪ್ರಗತಿ ಕುರಿತು ಮಾಹಿತಿ ಸಂಗ್ರಹಿಸಲಾಯಿತು. ಪ್ರತಿ ವಸತಿ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ 3 ಜನ ಪಾಲಕರಂತೆ ಒಟ್ಟು 30 ಜನ ಪಾಲಕರ ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು. ಈ ರೀತಿಯಾಗಿ ಅಧ್ಯಯನಕ್ಕೆ ದತ್ತಾಂಶಗಳ ಸಂಗ್ರಹಣೆ ಮಾಡಲಾಯಿತು.

**ದತ್ತಾಂಶಗಳ ವಿಶ್ಲೇಷಣೆ ಮತ್ತು ಸಂಖ್ಯಾಶಾಸ್ತ್ರೀಯ ವಿಧಾನ:** ಈ ಅಧ್ಯಯನದಲ್ಲಿ ವಸತಿ ಶಾಲೆಯ ನಿರ್ವಹಣೆ ಮತ್ತು ಶೈಕ್ಷಣಿಕ ಪ್ರಗತಿಯನ್ನು ಕುರಿತು ಪ್ರಶ್ನಾವಳಿಗಳಿಂದ ಪಡೆದ ಮಾಹಿತಿಯನ್ನು ಸಂಖ್ಯಾಶಾಸ್ತ್ರೀಯ ಶೇಕಡವಾರು ತಂತ್ರದ ಮೂಲಕ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

**ಅಧ್ಯಯನದ ಇತಿಮಿತಿಗಳು :**

1. ಈ ಅಧ್ಯಯನವನ್ನು ಬೆಳಗಾವಿ ತಾಲೂಕಿನ ವಸತಿ ಶಾಲೆಗಳಿಗೆ ಸಂಬಂಧಿಸಿದಂತೆ ನಡೆಸಲಾಗಿದೆ.
2. ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ 5, 6, 7ನೇ ವರ್ಗದ ವಿದ್ಯಾರ್ಥಿಗಳಿಗೆ ಇದು ಅನ್ವಯಿಸುವುದು.
3. ಇದು ವಸತಿ ಶಾಲೆಗಳ ನಿರ್ವಹಣೆ ಮತ್ತು ಶೈಕ್ಷಣಿಕ ಪ್ರಗತಿಗೆ ಮಾತ್ರ ಸಂಬಂಧಿಸಿದೆ.
4. ಈ ಅಧ್ಯಯನವು ಕನ್ನಡ ಮತ್ತು ಇಂಗಿಷ್ ಮಾಧ್ಯಮದ ವಸತಿ ಶಾಲೆಗಳಿಗೆ ಸಂಬಂಧಿಸಿದುದಾಗಿದೆ.

## ವಿಶ್ಲೇಷಣೆ ಮತ್ತು ಚರ್ಚೆ

**ಕೋಷ್ಟಕ 1: ಆರನೇ ತರಗತಿ ಮಕ್ಕಳ ಫಲಿತಾಂಶದ ವಿವರ**

| Year | 1st Class | | | | IInd Class | | | | IIIrd Class | | | | Pass | Fail |
|---|---|---|---|---|---|---|---|---|---|---|---|---|---|---|
| Semester | I | II | III | % | I | II | III | % | I | II | III | % | | |
| 2021-22 | 66 | 68 | 71 | 68 | 21 | 21 | 20 | 21 | 12 | 9 | 8 | 10 | 99 | 1 |
| 2022-23 | 74 | 79 | - | 76 | 18 | 15 | - | 16 | 8 | 6 | - | 7 | 99 | 1 |
| 2023-24 | 74 | 78 | - | 76 | 15 | 14 | - | 15 | 11 | 7 | - | 9 | 100 | - |

ಈ ಅಧ್ಯಯನದ ಮೂಲಕ 10 ವಸತಿ ಶಾಲೆಗಳನ್ನು ಸಮೀಕ್ಷಿಸಿದಾಗ 2021–22ನೇ ಸಾಲಿನ 6ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.68ರಷ್ಟು ಪ್ರಥಮ ಶ್ರೇಣಿಯಲ್ಲಿ, ಶೇ.21 ರಷ್ಟು ದ್ವಿತೀಯ ಶ್ರೇಣಿಯಲ್ಲಿ, ಶೇ.10ರಷ್ಟಯ ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ 99%ರಷ್ಟು ಆಗಿದೆ ಎಂದು ಸಮೀಕ್ಷಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು. 2022–23ನೇ ಸಾಲಿನ 6ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ 76 ರಷ್ಟು ಪ್ರಥಮ ಶ್ರೇಣಿಯಲ್ಲಿ, ಶೇ.16ರಷ್ಟು ದ್ವಿತೀಯ ಶ್ರೇಣಿಯಲ್ಲಿ ಶೇ.7ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ ಶೇ.99ರಷ್ಟು ಆಗಿದೆ ಎಂದು ಸಮೀಕ್ಷಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು. 2023–24ನೇ ಸಾಲಿನ 6ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.76ರಷ್ಟು ಪ್ರಥಮ ಶ್ರೇಣಿಯಲ್ಲಿ, ಶೇ.15ರಷ್ಟು ದ್ವಿತೀಯ ಶ್ರೇಣಿಯಲ್ಲಿ, ಶೇ.9ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ ಶೇ. 100ರಷ್ಟು ಆಗಿದೆ ಎಂದು ಸಮೀಕ್ಷಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು.

**ಕೋಷ್ಟಕ 2: ಏಳನೇ ತರಗತಿ ಮಕ್ಕಳ ಫಲಿತಾಂಶದ ವಿವರ**

| Year | Ist Class | | | | IInd Class | | | | IIIrd Class | | | | PASS | FAIL |
|---|---|---|---|---|---|---|---|---|---|---|---|---|---|---|
| Semester | I | II | III | % | I | II | III | % | I | II | III | % | | |
| 2021-22 | 74 | 76 | 81 | 77 | 17 | 14 | 13 | 15 | 8 | 8 | 5 | 7 | 99 | 1 |
| 2022-23 | 75 | 79 | - | 77 | 15 | 15 | - | 15 | 8 | 5 | - | 6 | 98 | 2 |
| 2023-24 | 76 | 82 | - | 79 | 16 | 12 | - | 14 | 6 | 7 | - | 6.5 | 100 | - |

ಈ ಅಧ್ಯಯನದ ಮೂಲಕ 10 ವಸತಿ ಶಾಲೆಗಳನ್ನು ಸಮೀಕ್ಷಿಸಿದಾಗ 2021–22 ನೇ ಸಾಲಿನ 7ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.77 ರಷ್ಟು ಪ್ರಥಮ ಶ್ರೇಣಿಯಲ್ಲಿ, ಶೇ.15 ರಷ್ಟು ದ್ವಿತಿಯ ಶ್ರೇಣಿಯಲ್ಲಿ, ಶೇ.7 ರ ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು, ಒಟ್ಟು ಫಲಿತಾಂಶ 99% ರಷ್ಟು ಆಗಿದೆ ಎಂದು ಸಮೀಕ್ಷಣಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು. 2022–23ನೇ ಸಾಲಿನ 7ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.77 ರಷ್ಟು ಪ್ರಥಮ ಶ್ರೇಣಿಯಲ್ಲಿ, ಶೇ.15 ರಷ್ಟು ದ್ವಿತೀಯ ಶ್ರೇಣಿಯಲ್ಲಿ, ಶೇ.6 ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ ಶೇ.98 ರಷ್ಟು ಪಾಸಾಗಿದ್ದು ಕೇವಲ ಶೇ.2 ರಷ್ಟು ಫೇಲಾದ ವಿದ್ಯಾರ್ಥಿಗಳ ಸಂಖ್ಯೆ ಸಮೀಕ್ಷಣಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು. 2023–24ನೇ ಸಾಲಿನ 7ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.79 ರಷ್ಟು ಪ್ರಥಮ ಶ್ರೇಣಿಯಲ್ಲಿ, ಶೇ.14 ರಷ್ಟು ದ್ವಿತೀಯ ಶ್ರೇಣಿಯಲ್ಲಿ, ಶೇ.6.5 ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ ಶೇ.100 ರಷ್ಟು ಪಾಸಾಗಿದ್ದು ಸಮಿಕ್ಷಣಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು.

**ಕೋಷ್ಟಕ–3 ಎಂಟನೇ ತರಗತಿ ಮಕ್ಕಳ ಫಲಿತಾಂಶದ ವಿವರ**

| Year | Ist Class | | | | IInd Class | | | | IIIrd Class | | | | PASS | FAIL |
|---|---|---|---|---|---|---|---|---|---|---|---|---|---|---|
| Semister | I | II | III | % | I | II | III | % | I | II | III | % | | |
| 2021-22 | 75 | 79 | 82 | 78.6 | 12 | 11 | 9 | 10.6 | 12 | 9 | 8 | 9.6 | 99 | 1 |
| 2022-23 | 80 | 84 | - | 82 | 14 | 11 | - | 12 | 6 | 5 | - | 5 | 99 | 1 |
| 2023-24 | 82 | 85 | - | 83 | 11 | 09 | - | 10 | 6 | 6 | - | 6 | 99 | 1 |

ಈ ಅಧ್ಯಯನದ ಮೂಲಕ 10 ವಸತಿ ಶಾಲೆಗಳನ್ನು ಸಮೀಕ್ಷಿಸಿದಾಗ 2021–22 ನೇ ಸಾಲಿನ 8ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.78.6 ರಷ್ಟು ಪ್ರಥಮ ಶ್ರೇಣಿಯಲ್ಲಿ ಶೇ.10.6 ರಷ್ಟು ದ್ವಿತೀಯ ಶ್ರೇಣಿಯಲ್ಲಿ, ಶೇ.9.6 ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ ಶೇ.99 ರಷ್ಟು ಪಾಸಾಗಿದ್ದು ಶೇ.1 ರಷ್ಟು ಫೇಲಾದ ಸಂಖ್ಯೆ ಈ ಸಮಿಕ್ಷಣಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು. 2023–24ನೇ ಸಾಲಿನ 8ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.82 ರಷ್ಟು ಪ್ರಥಮ ಶ್ರೇಣಿಯಲ್ಲಿ ಶೇ.12 ರಷ್ಟು ದ್ವಿತೀಯ ಶ್ರೇಣಿಯಲ್ಲಿ, ಶೇ.5 ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ ಶೇ 99 ರಷ್ಟು ಪಾಸಾಗಿದ್ದು ಶೇ. 1 ರಷ್ಟು ಫೇಲಾದ ವಿದ್ಯಾರ್ಥಿಗಳ ಸಂಖ್ಯೆ ಈ ಸಮೀಕ್ಷಣಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು. 2023–24ನೇ ಸಾಲಿನ 8ನೇ ವರ್ಗದ ಒಟ್ಟು ವಿದ್ಯಾರ್ಥಿಗಳಲ್ಲಿ ಶೇ.83 ರಷ್ಟು ಪ್ರಥಮ ಶ್ರೇಣಿಯಲ್ಲಿ ಶೇ.10ರಷ್ಟು ದ್ವಿತೀಯ ಶ್ರೇಣಿಯಲ್ಲಿ, ಶೇ.6 ರಷ್ಟು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದು ಒಟ್ಟು ಫಲಿತಾಂಶ ಶೇ.99ರಷ್ಟು ಪಾಸಾಗಿದ್ದು ಸಮೀಕ್ಷಣಾ ಸಂದರ್ಭದಲ್ಲಿ ಸಂಶೋಧಕರಿಗೆ ತಿಳಿದು ಬಂದಿತು.

ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ಮೂರು ವರ್ಷಗಳ ಪರೀಕ್ಷಾ ಫಲಿತಾಂಶವನ್ನು ಗಮನಿಸಿ ಶೇಕಡಾವಾರನ್ನು ಕಂಡುಹಿಡಿದಾಗ ಒಟ್ಟು ಫಲಿತಾಂಶವು ಶೇಕಡ 100 ರಷ್ಟು ಆಗಿದೆ ಎಂಬುದು ತಿಳಿದು ಬಂದಿತು. ಒಟ್ಟಿನಲ್ಲಿ ಅತ್ಯುತ್ತಮವಾದ ಫಲಿತಾಂಶವನ್ನು ಹೊಂದಿ ವಸತಿ ಶಾಲೆಗಳು ಪ್ರಗತಿ ಪಥದಲ್ಲಿ ಸಾಗುತ್ತಿವೆ ಎಂಬುದು ಸಂಶೋಧಕರಿಗೆ ಸಮೀಕ್ಷಣಾ ಸಂದರ್ಭದಲ್ಲಿ ತಿಳಿಯಿತು.

## ದತ್ತಾಂಶಗಳ ವಿಶ್ಲೇಷಣೆ

**ಬೆಳಗಾವಿ ತಾಲೂಕಿನ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳು ಪಡೆಯುತ್ತಿರುವ ಭೌತಿಕ ಸೌಲಭ್ಯಗಳ ವಿಶ್ಲೇಷಣೆ**

ಇದರಿಂದ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ಹೆಚ್ಚು ವಸತಿ ನಿಲಯಗಳಲ್ಲಿ ಶೇಕಡ 100ರಷ್ಟು ಶೌಚಾಲಯಗಳ ವ್ಯವಸ್ಥೆ, ಶೇಕಡ 100ರಷ್ಟು ಕುಡಿಯುವ ನೀರಿನ ವ್ಯವಸ್ಥೆ, ಶೇಕಡ 100ರಷ್ಟು ಸ್ನಾನ ಗೃಹಗಳ ವ್ಯವಸ್ಥೆ, ಶೇಕಡ 90ರಷ್ಟು ಆಟದ ಮೈದಾನದ ವ್ಯವಸ್ಥೆ, ಶೇಕಡ 90ರಷ್ಟು ಆಟದ ಸಲಕರಣೆಗಳ ವ್ಯವಸ್ಥೆ ಮುಂತಾದ ಭೌತಿಕ ಸೌಲಭ್ಯಗಳನ್ನು ಹೊಂದಿದ್ದು ತಿಳಿದುಬಂದಿದೆ.

**ಬೆಳಗಾವಿ ತಾಲೂಕಿನ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಿಸುವ ಉದ್ದೇಶದಿಂದ ಹಾಕಿಕೊಂಡ ವಿವಿಧ ಕಾರ್ಯಯೋಜನೆಗಳ ಬಗ್ಗೆ ವಿಶ್ಲೇಷಿಸುವುದು.**

ಇದರಿಂದ ಸ್ಪಷ್ಟವಾಗಿ ತಿಳಿದು ಬರುವದೇನೆಂದರೆ ಶೇಕಡ 100ರಷ್ಟು ವಸತಿ ನಿಲಯಗಳಲ್ಲಿ ಶಾಲಾ ವೇಳೆ ಹೊರತುಪಡಿಸಿ, ಪಾಠ ಹೇಳುವ ವ್ಯವಸ್ಥೆ, ಮಕ್ಕಳ ಸೃಜನಾತ್ಮಕತೆಯ ಬೆಳವಣಿಗೆಗಾಗಿ ಸ್ಪರ್ಧೆಗಳನ್ನು ಏರ್ಪಡಿಸುವದು, ಮನರಂಜನೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ವ್ಯವಸ್ಥೆ ಹೊಂದಿದ್ದು ಸಂಶೋಧಕರಿಗೆ ಸಮೀಕ್ಷಣಾ ಸಂದರ್ಭದಲ್ಲಿ ತಿಳಿದು ಬಂದಿದೆ. ಒಟ್ಟಾರೆ ಶೇಕಡ 100ರಷ್ಟು ವಸತಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಿಸುವ ಉದ್ದೇಶ ಧನಾತ್ಮಕವಾಗಿರುವುದು ಕಂಡುಬಂದಿದೆ.

**ಬೆಳಗಾವಿ ತಾಲೂಕಿನ ವಸತಿ ಶಾಲೆಗಳ ಮೂರು ವರ್ಷಗಳ 6, 7 ಮತ್ತು 8ನೇ ವರ್ಗದ ವಿದ್ಯಾರ್ಥಿಗಳ ಪ್ರಗತಿ ವಿಶ್ಲೇಷಿಸುವುದು.**

ಈ ತಾಲೂಕಿನ ವಸತಿ ಶಾಲೆಗಳ ಮೂರು ವರ್ಷಗಳ ಪರೀಕ್ಷಾ ಫಲಿತಾಂಶವನ್ನು ಗಮನಿಸಿ ಶೇಕಡಾವಾರು ಕಂಡುಹಿಡಿದಾಗ ಒಟ್ಟು ಫಲಿತಾಂಶವು ಶೇಕಡ 100ರಷ್ಟು ಆಗಿದೆ ಎಂಬುದು ತಿಳಿದು ಬಂದಿತು. ಒಟ್ಟಿನಲ್ಲಿ ಅತ್ಯುತ್ತಮ ಫಲಿತಾಂಶವನ್ನು ಹೊಂದಿ ವಸತಿ ಶಾಲೆಗಳು ಪಗತಿ ಪಥದಲ್ಲಿ ಸಾಗುತ್ತಿವೆ ಎಂಬುದು ಕಂಡುಬಂದಿದೆ. ಸಂಶೋಧಕರಿಗೆ ಸಮೀಕ್ಷಣಾ ಸಂದರ್ಭದಲ್ಲಿ ಒಟ್ಟಾರೆ ವಸತಿಶಾಲೆಗಳು ಉತ್ತಮ ಫಲಿತಾಂಶವನ್ನು ಹೊಂದಿ ಪರಿಮಾಣಾತ್ಮಕವಾಗಿಯೂ ಮತ್ತು ಗುಣಾತ್ಮಕವಾಗಿಯೂ ಪ್ರಗತಿ ಪಥದತ್ತ ಸಾಗುತ್ತಿವೆ ಎಂಬುದು ತಿಳಿದುಬಂದಿದೆ.

**ಬೆಳಗಾವಿ ತಾಲೂಕಿನ ವಿದ್ಯಾರ್ಥಿಗಳ ವಸತಿ ನಿಲಯದಲ್ಲಿ ಸೂಕ್ತ ವಾತಾವರಣ ಇರುವ ಬಗ್ಗೆ ವಿಶ್ಲೇಷಿಸುವುದು.**

ಇದರಿಂದ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ಶೇಕಡ 80ರಷ್ಟು ವಸತಿ ಶಾಲೆಗಳು ಸ್ವಂತ ಕಟ್ಟಡಗಳನ್ನು ಹೊಂದಿ ಸುತ್ತ ಮುತ್ತಲಿನ ವಾತಾವರಣ ಆಹ್ಲಾದಕರದಿಂದ ಕೂಡಿದ್ದು, ಶಾಂತವಾದ ವಾತವರಣ ಇರುವುದು ಸಂಶೋಧಕರಿಗೆ ನಿರೀಕ್ಷಣೆ ಮೂಲಕ ತಿಳಿದು ಬಂದಿತು. ಆದರೆ ಶೇ.20ರಷ್ಟು ವಸತಿ ನಿಲಯಗಳು ಮಾತ್ರ ಈ ಸೌಲಭ್ಯವನ್ನು ಹೊಂದಿಲ್ಲ ಎಂಬುದು ನಿರೀಕ್ಷಣೆ ಮೂಲಕ ಸಂಶೋಧಕರಿಗೆ ತಿಳಿದು ಬಂದಿತು.

**ಬೆಳಗಾವಿ ತಾಲೂಕಿನ ವಿದ್ಯಾರ್ಥಿಗಳ ಪಾಲಕರ ಅಭಿಪ್ರಾಯ ಸಂಗ್ರಹಿಸುವುದು.**

ವಸತಿ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪಾಲಕರ ಅಭಿಪ್ರಾಯವನ್ನು ಸಂಗ್ರಹಿಸಿದಾಗ ತಮ್ಮ ಮಕ್ಕಳು ವಸತಿ ಶಾಲೆಯಲ್ಲಿ ಕಲಿಯುವದರಿಂದ ಧನಾತ್ಮಕ ಬಲವು ಎದ್ದು ಕಾಣುತ್ತಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

**ಸಂಖ್ಯಾಶಾಸ್ತ್ರೀಯ ವಿಧಾನ :** ಶೇಕಡಾವಾರು

**ತೀರ್ಮಾನಗಳು :**

1. ವಸತಿ ಶಾಲೆಗಳು ಉತ್ತಮವಾದ ಭೌತಿಕ ಸೌಲಭ್ಯಗಳನ್ನು ಹೊಂದಿರುವುದು ಕಂಡುಬಂದಿದೆ.

2. ವಸತಿ ಶಾಲೆಗಳು ಉತ್ತಮವಾದ ನಿರ್ವಹಣೆಯನ್ನು ಹೊಂದಿರುವುದು ಕಂಡುಬಂದಿದೆ.
3. ವಸತಿ ಶಾಲೆಗಳಲ್ಲಿ ಸರ್ಕಾರದಿಂದ ಬಂದ ಎಲ್ಲ ಸೌಕರ್ಯಗಳನ್ನು ಮಕ್ಕಳಿಗೆ ಸರಿಯಾಗಿ ಒದಗಿಸುತ್ತಿರುವುದು ಕಂಡುಬಂದಿದೆ.
4. ವಸತಿ ನಿಲಯಗಳಲ್ಲಿ ಹಾಕಿಕೊಂಡ ವಿವಿಧ ಕಾರ್ಯ ಯೋಜನೆಯಿಂದ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಹೆಚ್ಚಿಗೆ ಆಗಿದ್ದು ಕಂಡುಬಂದಿದೆ.
5. 2021 ರಿಂದ 2024 ರವರೆಗಿನ 6.7, 8ನೇ ವರ್ಗದ ಪರೀಕ್ಷಾ ಫಲಿತಾಂಶವನ್ನು ಸಮೀಕ್ಷೆ ಮಾಡಿದಾಗ ಹೆಚ್ಚಳ ಕಂಡುಬಂದಿದೆ.
6. ಹೆಚ್ಚು ವಸತಿ ಶಾಲೆಗಳಲ್ಲಿ ಸೂಕ್ತ ವಾತಾವರಣವಿರುವುದು ಕಂಡುಬಂದಿದೆ.
7. ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಪಾಲಕರನ್ನು ಸಮೀಕ್ಷಿಸಿದಾಗ ತಮ್ಮ ಮಕ್ಕಳು ಭವಿಷ್ಯದಲ್ಲಿ ಉತ್ತಮವಾದ ಸಾಧನೆಯನ್ನು ಮಾಡುವ ಭರವಸೆಯನ್ನು ಹೊಂದಿದ್ದಾರೆ ಎಂದು ತಿಳಿದು ಬಂದಿತು.
8. ಬೆಳಗಾವಿ ತಾಲೂಕಿನಲ್ಲಿ ಹೆಚ್ಚಾಗಿ ವಸತಿ ಶಾಲೆಗಳು ಪ್ರಗತಿ ಪಥದಲ್ಲಿ ಸಾಗುತ್ತಿರುವುದು ಈ ಸಮೀಕ್ಷಣಾ ಮೂಲಕ ಕಂಡುಬಂದಿದೆ.

**ಮುಂದಿನ ಸಂಶೋಧನೆಗೆ ಸೂಚನೆಗಳು :**

1. ಬೇರೆ ಬೇರೆ ಪ್ರದೇಶದ (ತಾಲೂಕಿನ) ವಸತಿ ಶಾಲೆಗಳ ಸಂಪೂರ್ಣ ಮತ್ತು ಆಳವಾದ ಅಧ್ಯಯನವನ್ನು ಕೈಗೊಳ್ಳುವುದು.
2. ಖಾಸಗಿ ಶಾಲೆಗಳನ್ನು ಮತ್ತು ವಸತಿ ಶಾಲೆಗಳನ್ನು ಹೋಲಿಸಿ ತುಲನಾತ್ಮಕ ಅಧ್ಯಯನ ಮಾಡುವುದು.
3. ವಸತಿ ಶಾಲೆಯ ಮಕ್ಕಳ ಮನೋಭಾವನೆಯನ್ನು ಕುರಿತು ಸಮೀಕ್ಷೆ ಕೈಗೊಳ್ಳುವುದು.
4. ವಸತಿ ಶಾಲೆಯ ಮಕ್ಕಳ ಹೊಂದಾಣಿಕೆ ಸಮಸ್ಯೆಯನ್ನು ಕುರಿತು. ಅಧ್ಯಯನ ನಡೆಸುವುದು.
5. ಶಿಕ್ಷಕರ ಸಾಮಾಜಿಕ, ಆರ್ಥಿಕ ಸಮಸ್ಯೆಗಳ ಕುರಿತು ಮನೋಧೋರಣೆಯನ್ನು ಅಭ್ಯಸಿಸುವುದು.

**ಪರಾಮರ್ಶನ ಗ್ರಂಥಗಳು**


- ಭಟ್ಟಾ ಗಣೇಶ. (1989). *ಮಾಧ್ಯಮಿಕ ಶಿಕ್ಷಣದ ವ್ಯವಸ್ಥಾ ಕ್ರಮ.* ಪಿಎಚ್.ಡಿ. ಪ್ರಬಂಧ. ಮೈಸೂರು ವಿಶ್ವವಿದ್ಯಾನಿಲಯ.
- ಭಾಗೀರಥಿ ಶಿ. ಪಾಟೀಲ. *ಮುದ್ದೇಬಿಹಾಳ ತಾಲೂಕಿನ ವಸತಿ ಶಾಲೆಗಳ ನಿರ್ವಹಣೆ ಮತ್ತು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುರಿತು ಒಂದು ಅಧ್ಯಯನ.*
- ಭಾರ್ಗವ್ ಎಸ್.ಎಂ (1990). *ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಕೊಡಮಾಡಿದ ಸೌಲಭ್ಯಗಳ ಅಧ್ಯಯನ.* ಮಹಾರಾಜ ಸಯ್ಯಾಜಿ ರಾವ್ ವಿಶ್ವವಿದ್ಯಾಲಯ, ಬರೋಡ.
- ದೇಸಾಯಿ ಜಿ.ಎನ್. (1995). *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.* ಧಾರವಾಡ ಪ್ರಕಾಶನ.
- ದೇಸಾಯಿ ಜಿ.ಎನ್. (2004). *ಶೈಕ್ಷಣಿಕ ಸಂಶೋಧನೆ.* ವಿದ್ಯಾನಿಧಿ ಪ್ರಕಾಶನ.
- ಧುಲ್ಲಾ (1989). *ಆಡಳಿತಾತ್ಮಕ ಶೈಲಿ ಶಿಕ್ಷಕರ ಸೇವಾತೃಪ್ತಿದಾಯಕತೆ ಮತ್ತು ಶಾಲಾ ವಾತವರಣದ ಸ್ವರೂಪವನ್ನು ನಿರ್ಧರಿಸುವಿಕೆಯಲ್ಲಿ ವಿದ್ಯಾರ್ಥಿಗಳ ಸಂಸ್ಥೆಯ ಗ್ರಹಿಕೆಯ ಪಾತ್ರಗಳ ಕುರಿತು ಒಂದು ಅಧ್ಯಯನ.* ಪಿಎಚ್.ಡಿ ಶಿಕ್ಷಣ ಹೇಮಾವತಿ ನಂದನ ಬಹುಗುನಾ ಗರ್ವಾಲ ವಿಶ್ವವಿದ್ಯಾಲಯ.

- ಕೆಂಪಣ್ಣ ಬಿ. ತಳವಾರ. *ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಕ್ಕಳ ಹೊಂದಾಣಿಕೆಯ ಸಮಸ್ಯೆಗಳ ಕುರಿತು ಒಂದು ಅಧ್ಯಯನ.*
- ಕೊಂಗವಾಡ. (1995). *ಶೈಕ್ಷಣಿಕ ನಿರ್ವಹಣೆ.* ವಿದ್ಯಾನಿಧಿ ಪ್ರಕಾಶನ.
- ಕೊಂಗವಾಡ. (2019). *ಶೈಕ್ಷಣಿಕ ಆಡಳಿತ ನಿರ್ವಹಣೆ ಹಾಗೂ ಶಾಲಾ ಸಂಘಟನೆ.* ವಿದ್ಯಾನಿಧಿ ಪ್ರಕಾಶನ.
- ಓಬಳೇಶ ಘಟ್ಟಿ. (1996). *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.* ಕೇಂಬ್ರಿಡ್ಜ್ ಪಂಬ್ಲಿಷಿಂಗ್ ಕಂಪನಿ.
- ರಾಘವೇಂದ್ರ ಜೆ.ಬಿ. *ನವೋದಯ ವಿದ್ಯಾಲಯಗಳಲ್ಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯಲ್ಲಿ ಪಾಲಕ ಸಂಘದ ಪಾತ್ರ ಕುರಿತು ಒಂದು ಅಧ್ಯಯನ*
- ಸವಿತಾ ಆರ್. ಪಾಟೀಲ. *ಕಿತ್ತೂರು ರಾಣಿ ಚೆನ್ನಮ್ಮ ಬಾಲಕಿಯರ ವಸತಿ ಶಾಲೆಯ ವಿಕಾಸ ಮತ್ತು ಬೆಳವಣಿಗೆಯ ಒಂದು ಅಧ್ಯಯನ.*
- ಶಿವಶಂಕರ ಹೆಚ್.ಪಿ. (1987). *ಭಾರತದಲ್ಲಿ ಶಿಕ್ಷಣ.* ಹಂಜಿ ಪ್ರಕಾಶನ.
- ಸಿಂಗ. (1990). *ಬಿಹಾರದಲ್ಲಿನ ಗ್ರಾಮೀಣ ಪ್ರಾಥಮಿಕ ಶಾಲೆಯ ಕಾರ್ಯಗಳು ಆಧಾರದೊಂದಿಗೆ ಸಾಮಾಜಿಕ ಮತ್ತು ಆರ್ಥಿಕ ರಚನೆಯ ಕುರಿತು ಒಂದು ಅಧ್ಯಯನ.* ಎಮ್.ಫಿಲ್, ದೆಹಲಿ ವಿಶ್ವವಿದ್ಯಾಲಯ.
- ವಿಠ್ಠಲ್ ಎಸ್. ಸಿ. (1990). *ಆಯ್ಕೆ ಮಾಡಿದ 4 ರಾಜ್ಯಗಳಲ್ಲಿ ಮಾಧ್ಯಮಿಕ ಮತ್ತು ಉನ್ನತ ಮಾಧ್ಯಮಿಕ ಶಾಲೆಗಳ ಕಟ್ಟಡಗಳ ಕುರಿತು ಒಂದು ವಿಮರ್ಶಾತ್ಮಕ ಅಧ್ಯಯನ.* ಎನ್‌ಸಿಆರ್‌ಟಿ.
- ಯಾದವಾಡ ಎಸ್.ಬಿ. (2019). *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.* ವಿದ್ಯಾನಿಧಿ ಪ್ರಕಾಶನ.